ಓ.ಎಸ್ ನಂಃ *81* /2021

**ಪಿ .ಡಬ್ಲು–1**

ಸಾಕ್ಷಿಯನ್ನು ದಿನಾಂಕಃ 07.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ– ಪ್ರತಿವಾದಿ ಪರ ಶ್ರೀ. ಪಿ ಎಂ ಎಸ್ ವಕೀಲರಿಂದ**

4 ನೇ ವಾದಿ ವೆಂಕಟಮ್ಮನವರು ಈ ದಾವಾ ಹಾಕಿದ ನಂತರ ತೀರಿಕೊಂಡಿರುತ್ತಾರೆ. ಯಾವ ದಿನಾಂಕ ತೀರಿಕೊಂಡಿರುತ್ತಾರೆಂದು ಗೊತ್ತಿಲ್ಲ. ವಾದ ಪತ್ರಕ್ಕೆ 4 ನೇ ವಾದಿಯು ಸಹಿ ಮಾಡಿರುತ್ತಾರಾ ಎಂದರೆ ಹೌದು. 4 ನೇ ವಾದಿಯು ಸಹಿ ಹಾಕುತ್ತಾರಾ ಅಥವಾ ಹೆಬ್ಬಟ್ಟು ಹಾಕುತ್ತಾರಾ ಎಂದರೆ ಹೆಬ್ಬಟ್ಟು ಹಾಕುತ್ತಾರೆ. 4 ನೇ ವಾದಿಯ ಗಂಡ ಮುನಿಯಪ್ಪನವರು ಯಾರ ಮಗ ಎಂದರೆ ಗೋಪಾಲಪ್ಪನವರ ಮಗ. ಸದರಿ ಮುನಿಯಪ್ಪನವರು ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ಇಬ್ಬರು ಅವರು ಚಿಕ್ಕವೆಂಕಟಪ್ಪ ಮತ್ತು ಮುನಿಯಪ್ಪ. ನೀವು ಗೋಪಾಲಪ್ಪನವರ ಮಕ್ಕಳು ಅಲ್ಲ ಎಂದರೆ ಮುನಿವೆಂಕಟಪ್ಪನವರ ಮಕ್ಕಳು. ನಿಮ್ಮ ಕುಟುಂಬಕ್ಕೂ ಹಾಗೂ ಗೋಪಾಲಪ್ಪನವರ ಕುಟುಂಬಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮುಂದುವರೆದು ಒಟ್ಟು ಕುಟುಂಬ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬಕ್ಕೂ , ತೋಟಿ ಚಿಕ್ಕವೆಂಕಟಪ್ಪ ಮತ್ತು ಗೋಪಾಲಪ್ಪ ರ ಕುಟುಂಬ ಬೇರೆ ಬೇರೆ ಎಂದರೆ ಒಟ್ಟು ಕುಟುಂಬದವರು ಎಂದು ನುಡಿಯುತ್ತಾರೆ.

ನನ್ನ ತಂದೆಯ ತಂದೆ ವೆಂಕಟಪ್ಪ. ವೆಂಕಟಪ್ಪ ಮತ್ತು ಗೋಪಾಲಪ್ಪರವರು ಬೇರೆ ಬೇರೆ ಕುಟುಂಬದವರು ಎಂದರೆ ಸರಿಯಲ್ಲ. 4 ನೇ ವಾದಿಯು 1 ನೇ ಪ್ರತಿವಾದಿಯ ದೊಡ್ಡಮ್ಮ ಎಂದರೆ ಸರಿ . ನಿಮ್ಮ ಕುಟುಂಬದ ವೆಂಕಟಪ್ಪ ಹಾಗೂ 1 ನೇ ಪ್ರತಿವಾದಿಯ ತಾತ ವೆಂಕಟಪ್ಪ ಬೇರೆ ಬೇರೆ ಎಂದರೆ ಸರಿಯಲ್ಲ. ನೀವು ಒಟ್ಟು ಕುಟುಂಬದ ಸದಸ್ಯರು ಎಂದು ತೋರಿಸಲು ದಾಖಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಗುರುತಿನ ಚೀಟಿ , ಪಡಿತರ ಚೀಟಿ ಯನ್ನು ನೀಡಿರುತ್ತೀರಾ ಎಂದರೆ ನಮ್ಮ ಕುಟುಂಬಕ್ಕೆ ಸೇರಿದ ದಾಖಲೆ ನೀಡಿರುತ್ತೇನೆ.

ನಿಪಿ 1 ರಲ್ಲಿ ನಿಮ್ಮ ಕುಟುಂಬದ ಸದಸ್ಯರ ಹೆಸರು ಇದೆಯಾ ಎಂದರೆ ಇಲ್ಲ. ನಿಪಿ 13 ನಿಮ್ಮ ಕುಟುಂಬಕ್ಕೆ ಸೇರಿದ ವಂಶವೃಕ್ಷಎಂದರೆ ಸರಿ . ನಿಪಿ 13 ರಲ್ಲಿ ಪ್ರತಿವಾದಿಗಳ ಕುಟುಂಬದ ಸದಸ್ಯರ ಹೆಸರು ಇಲ್ಲ ಎಂದರೆ ಸರಿ . ನಿಪಿ 1 ಮತ್ತು ನಿಪಿ 13 ಬೇರೆ ಬೇರೆ ಎಂದರೆ ಸರಿ . ನಿಪಿ 1 ಮತ್ತು 13 ನಿಮಗೂ ಹಾಗೂ ಪ್ರತಿವಾದಿಗಳಿಗೂ ಯಾವುದೇ ರಕ್ತ ಸಂಬಂದ ಇದೆ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. ನಿಪಿ 14 ರ ಪಹಣಿಯಲ್ಲಿ ತೋಟಿ ಇನಾಮ್ತಿ ಎಂದು ಕಲಂ ನಂ 9 ರಲ್ಲಿ ಇರುತ್ತದೆ ಎಂದರೆ ಸರಿ . ದಾವಾ ಐಟ ನಂ 1 ಈವರಗೊ ನಿಮ್ಮ ಕುಟುಬಕ್ಕೆ ಮರು ಮಂಜೂರಾಗತಿಯಾಗಿರುವುದಿಲ್ಲ ಎಂದರೆ ಪ್ರತಿವಾದಿಗಳ ಕುಟುಂಬದ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ನಿಪಿ 16 ರಂತೆ 1/4 ಹಿಸ್ಸೆ ಗೋಪಾಲಪ್ಪನವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ . ಸರ್ವೆ ನಂ 37 ರಲ್ಲಿ ನಿಪಿ 16 ರಂತೆ 26 ಗುಂಟೆ ಸರ್ಕಾರಕ್ಕೆ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ . ನಿಪಿ 16 ರಲ್ಲಿ ನಿಮ್ಮ ತಂದೆ ಹಾಗೂ ತಾತನವರ ಹೆಸರು

ನಮೂದು ಇರುವುದಿಲ್ಲ ಎಂದರೆ ದೊಡ್ಡವರ ಹೆಸರಿನಲ್ಲಿ ಇರುತ್ತದೆ. ನಿಪಿ 18 ಮತ್ತು 19 ರಂತೆ ದಾವಾ ಐಟಂ ನಂ 4 ರ ಪಹಣಿಯಲ್ಲಿ ತೋಟಿ ಇನಾಮ್ತಿ ಎಂದು ಇರುತ್ತದೆ ಎಂದರೆ ಸರಿ . ದಾವಾ ಐಟಂ ನಂ 4 ರಲ್ಲಿ 11 ಎಕರೆ 7 ಗುಂಟೆ ಇದ್ದು ಸದರಿ ಜಮೀನ ಮರು ಮಂಜೂರಾತಿಗಾಗಿ ನೀವು ಅರ್ಜಿ ಸಲ್ಲಿಸಿಲ್ಲದ ಕಾರಣ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ತೋಟಿ ಇನಾಮ್ತಿ ವಾರಸುದಾರರು ಹಾಗೂ ಬಾರಾಬರುತಿದಾರರು ಎಂಬ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಕೋಟ್ಟಿರುತ್ತೇನೆ. ನೀವು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಐಂಟ ನಂ 1 ಮತ್ತು 4 ನಿಮ್ಮ ಹೆಸರಿನಲ್ಲಾಗಲೀ ಉಳಿದ ವಾದಿಯರ ಹೆಸರಿನಲ್ಲಾಗಲೀ ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾತ ದೊಡ್ಡ ವೆಂಕಟಪ್ಪಹಾಗೂ ನಿಮ್ಮ ತಂದೆ ತೋಟಿ ಮುನಿವೆಂಕಟಪ್ಪನವರಿಗೆ ನಿಪಿ 28 ರಂತೆ ಯಾವುದೇ ಮರು ಮಂಜೂರಾತಿಯಾಗಿರುವುದಿಲ್ಲ ಎಂದರೆ ಸರಿ . ನಿಪಿ 29 ಪೋಟೋ ದಲ್ಲಿ ಕಾಣುವ ಮನೆ ಯಾವ ಸರ್ವೆ ನಂಬರಿನಲಿ ಇರುತ್ತದೆ ಎಂದರೆ ಸರ್ವೆ ನಂ 38 ರಲ್ಲಿ ಇರುತ್ತದೆ. ನಿಪಿ 29 ಮತ್ತು 32, 34 ಮತ್ತು 35 ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದು ಅವುಗಳಲ್ಲಿ ಬರೆದಿಲ್ಲ ಎಂದರೆ ಸರಿ . ನಿಪಿ 36 ರ ಮೇಲೆ ಯಾವ ಸರ್ವೆ ನಂಬರ್ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 2 ರಲ್ಲಿ ವೆಂಕಟಮ್ಮ ಮತ್ತು ಚಿಕ್ಕವೆಂಕಟಪ್ಪ ರವರ ಹೆಸರಿನಲ್ಲಿ ಖಾತೆ ಅಗಿದ್ದು ನಿಮ್ಮ ತಾತ ಹಾಗೂ ತಂದಯ ಹೆಸರಿಗೆ ಅಗಿಲ್ಲ ಎಂದರೆ ಸರಿ . ನಿಪಿ 21 ರಲ್ಲಿ ನಿಮ್ಮ ತಂದೆ ಹಾಗೂ ತಾತನ ಹೆಸರು ಇರುವುದಿಲ್ಲ ಎಂದರೆ ಸರಿ . ನಿಪಿ 4 ರಲ್ಲಿ 2 ಎಕೆರ 30 ಗುಂಟೆ ನಿಮ್ಮ ತಂದೆ ಹಾಗೂ ತಾತನ ಹೆಸರು ಇರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ 1 ರಿಂದ 4 ಎಲ್ಲಾ ಸ್ವತ್ತುಗಳು ವೆಂಕಟಮ್ಮ ಕೋ ಮುನಿಯಪ್ಪ ಹಾಗೂ ಚಿಕ್ಕವೆಂಕಟಪ್ಪ ಬಿನ್ ಗೋಪಾಲಪ್ಪನವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನಿಮ್ಮ ಪಾಲಿಗೆ ಎಷ್ಟು ಬರುತ್ತದೆ ಎಂದು ತೋರಿಸಿಲ್ಲ ಎಂದರೆ ಸರಿ. ನಿಪಿ 7 ರಿಂದ 11 ಚಿಕ್ಕವೆಂಕಟಪ್ಪ ಬಿನ್ ಗೋಪಾಲಪ್ಪನವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ ಕಂದಾಯ ನಾವು ಕಟ್ಟಿರುತ್ತೇವೆ.

ನಿಮ್ಮ ವಾದಪತ್ರದಲ್ಲಿ ಗೋಪಾಲಪ್ಪ ಮತ್ತು ಅವರ ಕುಟುಂಬದವರು ನಮಗೆ ಮೋಸ ಮಾಡಿ ಮರು ಮಂಜುರಾತಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1/3 ಭಾಗಕ್ಕೆ ಮುನಿವೆಂಕಟಪ್ಪನವರು ಕಂದಾಯ ಕಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದಿನಾಂಕ 5.03.2021 ರಂದು ಪಂಚಾಯಿತಿ ಅಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಾಗೂ ಪ್ರತಿವಾದಿಗಳ ನಡುವೆ ಯಾವುದೇ ಹಕ್ಕು ಬಿಡುಗಡೆ ಪತ್ರ ಅಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ರಿಂದ 4 ರ ಷಡ್ಯೂಲ್ ಸಹ ಸುಳ್ಳು ನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. 4 ನೇ ವಾದಿಯನ್ನು ಹೊರತುಪಡಿಸಿ ನೀವು ಹಾಗೂ ಇತರ ವಾದಿಯರು ಒಟ್ಟು ಕುಟುಂಬದಲ್ಲಿರುವ ಬಗ್ಗೆ ಯಾವುದೇ ದಾಖಲಾತಿ ನೀಡಿರುವುದಿಲ್ಲ ಎಂದರೆ

ಸರಿಯಲ್ಲ. ನಿಮಗೂ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ವಾದಪತ್ರದಲ್ಲಿರುವ ಅಂಶಗಳು ಪ್ರತಿವಾದಿಗಳಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳು ಸುಳ್ಳುನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**